# ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

www.karnatakayakshaganaacademy.com

ಪ್ರಾಯೋಜಕತ್ವದಲ್ಲಿ ಪ್ರಕಾಶಿತ

ಯಕ್ಷಗಾನ ಪ್ರಸಂಗ

# ವೀರ ಕೌಂಡ್ಲಿಕ

ಕವಿ

## ಎಮ್. ಆರ್. ವಾಸುದೇವ ಸಾಮಗ

ಅಂತರಜಾಲ ಆವೃತ್ತಿ, ಸಹ-ಪ್ರಕಾಶಕರು ಮತ್ತು ಪ್ರಕಾಶನ ನಿರ್ವಾಹಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.com

ಆವೃತ್ತಿ ೧.೦ ಜನವರಿ ೨೦, ೨೦೨೦

ಯಕ್ಷವಾಹಿನಿ®

Email: yakshaprasangakosha@gmail.com, yakshavahini@gmail.com Blog: www.yakshaprasangakosha.com



## ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ್ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಡಾ. ಪ್ರದೀಪ್ ಸಾಮಗ (ಯೋಜನಾ ಕಾರ್ಯದರ್ಶಿ), ನಟರಾಜ ಉಪಾಧ್ಯ (ಯೋಜನಾ ಸಹಕಾರ್ಯದರ್ಶಿ), ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಅಶ್ವಿನಿ ಹೊದಲ, ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾ ಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ, ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರ ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಮ್. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ವಾಸುದೇವ ಸಾಮಗ, ಎಂ.ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣುಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ, ಉಡುಪಿ, ಯಕ್ಷಸಿಂಚನ, ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್ , ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್ ಎಮ್ ಹೆಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ.ಎಸ್, ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ರಾಘವೇಂದ್ರ ಮಯ್ಯ (ಲೆಕ್ಕಪತ್ರ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

# ಮೊದಲ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವುದು ಪ್ರಸಂಗಸಾಹಿತ್ಯ. ಅದು ಯಕ್ಷಗಾನದ ಏಕಮಾತ್ರ ಲಿಖಿತಸಾಹಿತ್ಯವೂ ಹೌದು. ಅದರ ಅಭಾವದಲ್ಲಿ ಯಕ್ಷಗಾನದ ಅಡಿಪಾಯವೇ ಇಲ್ಲವಾಗುತ್ತದೆ. ಈಗ ಅಂದಾಜಿಸಿದಂತೆ ಇಂಥ ಪ್ರಸಂಗಕೃತಿಗಳ ಸಂಖ್ಯೆ ಐದು ಸಾವಿರಕ್ಕೂ ಮಿಕ್ಕಿದೆ. ವರ್ಷವರ್ಷವೂ ನೂರಾರು ಹೊಸಕೃತಿಗಳ ಸೇರ್ಪಡೆಯಾಗುತ್ತಲೇ ಇವೆ. ಆದರೆ ವಿಷಾದದ ಸಂಗತಿಯೆಂದರೆ ಸೂಕ್ತವಾದ ವಿತರಣಾ ವ್ಯವಸ್ಥೆಯಿಲ್ಲ. ಬೇಕೆಂಬುವರಿಗೆ ಪ್ರಸಂಗಗಳು ಲಭಿಸುತ್ತಿಲ್ಲ. ಅನೇಕ ಪ್ರಾಚೀನ ಅರ್ವಾಚೀನ ಕೃತಿಗಳಿಗೆ ಮುದ್ರಣ ಭಾಗ್ಯವಿಲ್ಲ. ಮುದ್ರಿತವಾದ ಕೃತಿಗಳ ಮಾರಾಟ ಮತ್ತಷ್ಟು ತೊಡಕಿನದು. ಹೀಗಾಗಿ ಈಗಾಗಲೇ ಅನೇಕ ಕೃತಿಗಳು ನಾಶವಾಗಿವೆ; ಮತ್ತಿಷ್ಟು ನಾಶವಾಗುತ್ತಿವೆ.

ಯಕ್ಷಗಾನ ಪ್ರಸಂಗಗಳು ಕನ್ನಡಸಾಹಿತ್ಯದ ಶ್ರೀಮಂತಿಕೆಯ ದ್ಯೋತಕಗಳು. ಕನ್ನಡದಲ್ಲಿ ಬೆಳೆದು ಬಂದ ಛಂದೋ ವೈವಿಧ್ಯದ ಸಾರವನ್ನೆಲ್ಲ ಹೀರಿಕೊಂಡು ಸುಪುಷ್ಟವಾಗಿ ಬೆಳೆದು ನಿಂತ ಈ ಸಾಹಿತ್ಯ ಪ್ರಕಾರವು ಕನ್ನಡಕ್ಕೊಂದು ಹೆಮ್ಮೆ. ಅದರ ಸಿದ್ಧಿ ಸಾಧನೆಗಳನ್ನು ಕುರಿತು ಗಂಭೀರವಾದ ಅಧ್ಯಯನದ ಆವಶ್ಯಕತೆಯಿದೆ. ಆದರೆ ಪ್ರಸಂಗಳ ಅಲಭ್ಯತೆ ಅಧ್ಯಯನಕ್ಕೆ ತೊಡಕಾಗಿದೆ. ಅಧ್ಯಯನಕ್ಕೆ ತೊಡಗುವವರಿಗೆ ಕೃತಿಗಳನ್ನು ಸಂಗ್ರಹಿಸುವುದೊಂದು ದೊಡ್ಡ ಸವಾಲಾಗಿದೆ. ಇದರಿಂದ ಯಕ್ಷಗಾನಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ ಹಾನಿಯಾಗುತ್ತಿದೆ.

ಇದನ್ನು ಮನಗಂಡ ಯಕ್ಷಗಾನ ಅಕಾಡೆಮಿಯು ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೊಂಡಿದೆ. ಅದೇ ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣ. ಎಲ್ಲ ಪ್ರಸಂಗಗಳನ್ನು ಡಿಜಿಟಲೀಕರಣಕ್ಕೊಳಪಡಿಸಿ ಅಕಾಡೆಮಿಯ ವೆಬ್ಸೈಟಿನ ಮೂಲಕ ಆಸಕ್ತರಿಗೆ ಉಚಿತವಾಗಿ ತಲುಪಿಸುವ ವ್ಯವಸ್ಥೆ ಇದು. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಬೇಕಾದ ಕೃತಿಯನ್ನು ಪಡೆದುಕೊಳ್ಳಲು ಯಕ್ಷಗಾನ ಪ್ರಸಂಗವನ್ನು ತೆಗೆದುಕೊಂಡು ಯಕ್ಷಗಾನ ಮಾಡುವವರಿಗೆ ಅತ್ಯಂತ ಅನುಕೂಲ. ಅಧ್ಯಯನಕ್ಕೂ, ಸಂಗ್ರಹಕ್ಕೂ ಅನುಕೂಲ ಹಾಗೂ ಯಕ್ಷಗಾನ ಪ್ರಿಯರಿಗೆ ಆಪ್ತವಾದೀತೆಂದು ಭಾವಿಸಿದ್ದೇವೆ.

ಇದನ್ನು ಕಾರ್ಯಗತಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವು ದೊಡ್ಡದು. ಈ ಕಾರ್ಯಕ್ಕೆ ಯಕ್ಷವಾಹಿನಿ ಸಂಸ್ಥೆಯು ಕೈಜೋಡಿಸಿರುವುದು ಹಾಗೂ ಪುಸ್ತಕರೂಪದಲ್ಲಿ ಯಕ್ಷಗಾನ ಪ್ರಸಂಗವನ್ನು ಸಿದ್ಧಗೊಳಿಸಿಕೊಡುತ್ತಿದೆ. ಇದಕ್ಕೆ ಅಕಾಡೆಮಿಯ ಸರ್ವಸದಸ್ಯರ ಸಹಮತವಿದೆ. ಈ ಯೋಜನೆಯನ್ನು ಕೃತಿರೂಪಕ್ಕೆ ತರಲು ಸಹಕರಿಸಿದವರೆಲ್ಲರನ್ನೂ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನೂ, ಸರ್ಕಾರವನ್ನೂ ಹೃತ್ಪೂರ್ವಕವಾಗಿ ನೆನೆಯುತ್ತೇವೆ.



**ಪ್ರೊ. ಎಂ. ಎ. ಹೆಗಡೆ**
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ



**ಎಸ್. ಎಚ್. ಶಿವರುದ್ರಪ್ಪ**
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಅಕಾಡೆಮಿ

## ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನುಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.



**ಶ್ರೀಧರ ಡಿ. ಎಸ್.**
ಪ್ರಧಾನ ಸಂಪಾದಕರು



**ಗಿಂಡೀಮನೆ ಮೃತ್ಯುಂಜಯ**
ಸಹ ಸಂಪಾದಕರು



**ರವಿ ಮಡೋಡಿ**
ಯೋಜನಾಧ್ಯಕ್ಷರು

## ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ಕಾಣ್ಕೆಯಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರೆಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

**ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು**

**ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ**

**ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ**

**ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ**

# ಸಾರಾಂಶ

**ಪ್ರಸಂಗ ವಿಧ:**

ಪೌರಾಣಿಕ

**ಆಧಾರ ಗ್ರಂಥ:**

ಜೈಮಿನಿ ಭಾರತ

**ಭಾಷೆ:**

ಕನ್ನಡ

**ಹಿಂದಿನ ಪ್ರಕಾಶನಗಳ ವಿವರ:**

ಅನ್ವಯಿಸುವುದಿಲ್ಲ

**ಹಕ್ಕುಸ್ವಾಮ್ಯ ವಿವರ:**

ಈ ಅಂತರಜಾಲ ಆವೃತ್ತಿಯು ವಿಶ್ವದಾದ್ಯಂತ ಉಚಿತವಾಗಿ ಹಂಚಲ್ಪಡುವುದೇ ಜಂಟಿ ಪ್ರಕಾಶಕರ ಘನ ಉದ್ದೇಶವು. ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**

೧೦೪

**ಪಾತ್ರಗಳು:**

ಕಮಲಭೂಪ, ಮಂತ್ರಿ, ಬ್ರಹ್ಮ, ಕೌಂಡ್ಲಿಕ, ಮಂತ್ರಿ, ನಾರದ, ಕೃಷ್ಣ, ರುಕ್ಮಿಣಿ, ಪಂಚಪಾಂಡವರು, ಬಾಗಿಲದೂತ, ದ್ರೌಪದಿ, ರತಿ, ಗೂಢಚರ, ಮನ್ಮಥ, ಚಂಡಿರೂಪ

**ಕಥಾಸಾರಾಂಶ:**

ಕಮಲವತಿಯರಸ ಕಮಲಭೂಪನು ತನ್ನ ಮಗಳಾದ ರತಿಯ ಮದುವೆಯ ಬಗ್ಗೆ ಅಮಾತ್ಯನಲ್ಲಿ ಸೂಕ್ತ ವರನ್ಯಾರೆಂಬ ಬಗ್ಗೆ ಚರ್ಚಿಸುತ್ತಾನೆ. ಅದಕ್ಕೆ ಸಚಿವನು ಮಾದ್ರೇಶನಾದ ತಮ್ಮ ಅಳಿಯನೂ ಆದ ಕೌಂಡ್ಲಿಕನೇ ಸರಿಯಾದ ವರನೆನ್ನುತ್ತಾನೆ. ಅದೇ ಸರಿಯೆಂದು ಬಗೆದ ಕಮಲಭೂಪನು, ತನ್ನಳಿಯನಿಗೆ ಈ ವಿಷಯವನ್ನು ಪ್ರಸ್ತಾಪಿಸುವ ಮನ ಮಾಡುತ್ತಾನೆ. ಇತ್ತ ಮಾದ್ರೇಶ ಕೌಂಡ್ಲಿಕನು ತನ್ನ ಪೂರ್ವ ಜನ್ಮ ವೃತ್ತಾಂತವನ್ನು ಕಾಪಾಲಿಕನಿಂದ ತಿಳಿದು, ಅಭಿಮನ್ಯುವಾಗಿದ್ದ ತಾನು ಮಡಿಯುವಲ್ಲಿ ಕೃಷ್ಣನ ಕೈವಾಡವೇ ಕಾರಣವೆಂದು ಬಗೆದು, ಜನ್ಮಾಂತರದ ಸೇಡು ತೀರಿಸಿಕೊಳ್ಳಲು ದ್ವಾರಕೆಗೆ ಮುತ್ತಿಗೆ ಹಾಕುವ ಬಯಕೆಯನ್ನು ಮಂತ್ರಿಗಳಲ್ಲಿ ಹೇಳಿದಾಗ, ಮಂತ್ರಿಗಳು ಕೃಷ್ಣ ದ್ವೇಷದಿಂದ ನರಕ, ಹಂಸ, ಡಿಬಿಕ, ಕಂಸ, ಚೈದ್ಯ, ಮಾಗಧಾದಿಗಳಿಗಾದ ಗತಿಯನ್ನು ವಿವರಿಸಿ, ವಿವೇಕದಿಂದ ವರ್ತಿಸುವ ಸಲಹೆ ನೀಡುತ್ತಾರೆ. ವರಬಲವಿಲ್ಲದೆ ಕೃಷ್ಣನನ್ನು ಕೊಲ್ಲುವುದು ಅಸಾಧ್ಯವೆಂದರಿತ ಕೌಂಡ್ಲಿಕನು ಉಗ್ರ ತಪಸ್ಸಿನಿಂದ ಬ್ರಹ್ಮನನ್ನೊಲಿಸಿ ಯೋನಿಜರಾರಿಂದಲೂ ಮರಣ ಬರದಂತೆ ವರವನ್ನು ಪಡೆಯುತ್ತಾನೆ. ವರಬಲಾನ್ವಿತನಾಗಿ ನೇರ ಯುದ್ಧಕ್ಕೆಂದು ಹೊರಟ ಮಾದ್ರೇಶನಿಗೆದುರಾಗಿ ವಿಷಯ ತಿಳಿದ ನಾರದರು, ಇನ್ನೆಂಟು ದಿನಗಳಲ್ಲಿ ಕೌಂಡ್ಲಿಕ – ಕೃಷ್ಣರ ಮಧ್ಯೆ ಭೀಕರ ಧುರವನ್ನೇರ್ಪಡಿಸುವೆನೆಂದೂ, ಅದಕ್ಕಾಗಿ ದ್ವಾರಕೆಗೆ ಹೋಗುವ ಅಗತ್ಯವಿಲ್ಲವೆಂದೂ ಹೇಳಿ, ಕೌಂಡ್ಲಿಕನನ್ನು ಕಳಿಸುತ್ತಾರೆ. ಅಲ್ಲಿಂದ ನಾರದರು ನೇರವಾಗಿ ಕೃಷ್ಣನಲ್ಲಿಗೆ ಬಂದು, ದುಷ್ಟ ಮಾದ್ರೇಶನ ಹಗೆಯ ಕುರಿತು, ಅದನ್ನು ತಾನು ಎಂಟು ದಿನಗಳವರೆಗೆ ತಡೆದು ಬಂದ ಕುರಿತು ಹೇಳುತ್ತಾರೆ. ಕೃಷ್ಣನು ನಸು ನಕ್ಕು, ಎಂಟು ದಿನಗಳಲ್ಲಿ ಕೌಂಡ್ಲಿಕನನ್ನು ವಧಿಸುವ ಉಪಾಯ ಮಾಡುವೆನೆನ್ನುತ್ತಾ ನಾರದರನ್ನು ಬೀಳ್ಕೊಡುತ್ತಾನೆ. ಇದೇ ಸಮಯಕ್ಕೆ ಕೃಷ್ಣನಲ್ಲಿಗೆ ರುಕ್ಮಿಣಿಯು ಬೇಸರದಿಂದ ಬಂದು, ಪ್ರಾಯ ಪ್ರಬುದ್ಧನಾದ ಮಗ ಮನ್ಮಥನಿಗೆ ಮದುವೆ ಮಾಡಿಸೆಂದು ಅವಸರಿಸುತ್ತಾಳೆ. ಅವಳಿಗೆ ಇನ್ನೆಂಟು ದಿನಗಳೊಳಗೆ ಮದುವೆ ಮಾಡಿಸುವೆನೆಂದು ಶಪಥವನ್ನಾಡಿ ಕೃಷ್ಣನು ದಾರುಕನ ಮೂಲಕ ಹಸ್ತಿನೆಯಲ್ಲಿರುವ ದ್ರೌಪದಿಯನ್ನು ಕರೆಸಿಕೊಳ್ಳುತ್ತಾನೆ. ಕಮಲಾವತಿಗೆ ಹೋಗಿ, ಕಮಲಭೂಪನ ಮಗಳಾದ ರತಿಯನ್ನು ಮಾರನಿಗೆ ಮದುವೆ ಮಾಡಿಸುವ ಹೊಣೆಯನ್ನವಳಿಗೆ ಹೊರಿಸುತ್ತಾನೆ. ಅಣ್ಣನಾಣತಿಯಂತೆ ಕಮಲಭೂಪನಲ್ಲಿ ರತಿಯನ್ನು ಕೇಳಿದಾಗ, ಅರಸನು ತನ್ನಳಿಯನಾದ ಕೌಂಡ್ಲಿಕನಿಗೆ ಮಗಳನ್ನು ಕೊಡುವ ನಿಶ್ಚಯ ಮಾಡಿಯಾಗಿರುವುದರಿಂದ, ಈಗ ಮನ್ಮಥನಿಗಿತ್ತರೆ, ಸಂಕಲ್ಪ ದೋಷ ಬರುತ್ತದೆಯೆನ್ನುತ್ತಾನೆ. ಆಗಲ್ಲಿಗೆ ಬಂದ ರತಿಯು ನಾರದರು ತನಗೆ ಒರೆದ ತನ್ನ ಪೂರ್ವ ಜನ್ಮ ವೃತ್ತಾಂತವನ್ನೆಲ್ಲ ತಂದೆಗೆ ವಿವರಿಸಿ, ಮನ್ಮಥನನ್ನು ಹೊಂದುವ ಸಲುವಾಗಿಯೇ ಜನ್ಮವೆತ್ತಿದ ನನಗೆ, ಆತ ದೊರೆಯದಿದ್ದರೆ ಅಗ್ನಿಪ್ರವೇಶ ಮಾಡುವೆಯೆನ್ನುತ್ತಾಳೆ. ಮಗಳ ಮನದಿಂಗಿತ, ಪೂರ್ವ ವೃತ್ತಾಂತಗಳನ್ನೆಲ್ಲ ಅರಿತ ಕಮಲಭೂಪನು ಮಗಳನ್ನು ಮಾರನಿಗೀವುದುಚಿತವೆಂದು ಮನಗಂಡು, ಅಂದಿನಿಂದೆಂಟನೆ ದಿನಕ್ಕೆ ದಿಬ್ಬಣಗೂಡಿ ಬರ ಹೇಳಿ ದ್ರೌಪದಿಯನ್ನು ಬೀಳ್ಕೊಡುತ್ತಾನೆ. ಇತ್ತ ವಿಷಯ ತಿಳಿದ ಕೌಂಡ್ಲಿಕನು ಸಿಟ್ಟಿನಿಂದ ತನ್ನ ಹಕ್ಕಿನ ಹೆಣ್ಣಾದ ರತಿಯನ್ನು ಎಳೆ ತರಲು ಕಮಲಾವತಿಯೆಡೆಗೆ ಹೊರಡಲುದ್ಯುಕ್ತನಾಗುತ್ತಾನೆ. ಅಲ್ಲಿಗೆ ನಾರದರು ಆಗಮಿಸಿ, ಹೆಣ್ಣನ್ನು ಎಳೆ ತರುವಾಗ, ಪ್ರಶ್ನಿಸಬರುವ ಕೃಷ್ಣನೊಂದಿಗೆ ಹೋರಾಟ ಏರ್ಪಟ್ಟು, ಕೌಂಡ್ಲಿಕನ ಮನಸ್ಸಿನ ಹಗೆ ತಣಿಯುವುದೆಂದು ಹುರಿದುಂಬಿಸಿ ಕಳುಹಿಸುತ್ತಾರೆ.

ಕಮಲಾವತಿಗೈತಂದ ಕೌಂಡ್ಲಿಕನು ಮಾವನೊಂದಿಗೆ, ರತಿಯನ್ನು ತನ್ನನ್ನು ಬಿಟ್ಟು ಮಾರನಿಗೆ ಕೊಡುತ್ತಿರುವ ಬಗ್ಗೆ ಆಕ್ಷೇಪವೆತ್ತಿ ಜಗಳ ಆರಂಭಿಸುತ್ತಾನೆ. ನಡೆದ ಯುದ್ಧದಲ್ಲಿ ಕಮಲಭೂಪನು ಸಾವನ್ನಪ್ಪುತ್ತಾನೆ. ತಡೆದು ಕದನಗೈದ ಮಾರನೂ ಸಾಯುತ್ತಾನೆ.

ಯೋನಿಜರಿಂದ ಮರಣವಿಲ್ಲೆಂಬ ವರ ಬಲಾನ್ವಿತನಾದ ಕೌಂಡ್ಲಿಕನನ್ನು ಕೊಲ್ಲಲು ಅಯೋನಿಜೆಯಾದ ದ್ರೌಪದಿಯನ್ನು ಕೃಷ್ಣ ಕರೆಸಿ, ಯುದ್ಧಕ್ಕೆ ಕಳುಹಿಸುತ್ತಾನೆ. ಚಂಡಿಯಾಗಿ ಕಾದಾಡಿ ದ್ರೌಪದಿಯು ಕೌಂಡ್ಲಿಕನನ್ನು ವಧಿಸುತ್ತಾಳೆ. ಹರಿಯಾದೇಶದಂತೆ ಆಂಜನೇಯನು ಸಂಜೀವನವನ್ನು ತಂದು, ಸತ್ತವರನ್ನೆಲ್ಲ ಬದುಕಿಸುತ್ತಾನೆ. ಮಾರನೊಂದಿಗೆ ರತಿಯ ವಿವಾಹ ಏರ್ಪಟ್ಟು, ಕಥೆಗೆ ಮಂಗಳವಾಗುತ್ತದೆ.

**ಕವಿ ಪರಿಚಯ :**

ಮಲ್ಪೆಯ ಹರಿದಾಸ ರಾಮದಾಸ ಸಾಮಗ - ನಾಗರತ್ನ ದಂಪತಿಗಳ ಎರಡನೇ ಮಗನಾಗಿ 1948 ರಲ್ಲಿ ಹುಟ್ಟಿದ ವಾಸುದೇವ ಸಾಮಗರು, ಮೆಟ್ರಿಕ್ಯುಲೇಷನ್ ತನಕ ವ್ಯಾಸಂಗ ಮಾಡಿದರು. ತಮ್ಮ ತಂದೆ - ದೊಡ್ಡಪ್ಪ ಹಾಕಿಕೊಟ್ಟ ಯಕ್ಷಗಾನದ ಮಾರ್ಗದಲ್ಲಿಯೇ ತಮ್ಮ ಬದುಕನ್ನು ಕಂಡವರು. ಪಿ. ಶ್ರೀಧರ ಹಂದೆಯವರ ಒತ್ತಾಸೆಯ ಮೇರೆಗೆ ಯಕ್ಷಗಾನ ಕಲಾವಿದನಾಗಿ ಅಮೃತೇಶ್ವರಿ ಮೇಳವನ್ನು ಸೇರಿದ ಸಾಮಗರು ಮತ್ತೆ ಯಕ್ಷಗಾನ ರಂಗದಲ್ಲಿ ದೈತ್ಯ ಪ್ರತಿಭೆಯಾಗಿ ನೆಲೆ ಕಂಡುಕೊಂಡರು. ಪಾತ್ರೋಚಿತ ಅಭಿನಯ, ಆಕರ್ಷಕ ಶೈಲಿ, ವಿದ್ವತ್ಪೂರ್ಣ ಮಾತುಗಾರಿಕೆ, ಹಿತಮಿತ ಕುಣಿತದೊಂದಿಗೆ ತೆಂಕು- ಬಡಗು ಎರಡೂ ಶೈಲಿಯಲ್ಲಿಯೂ ಬಹು ಬೇಡಿಕೆಯ ಕಲಾವಿದರಾದರು. ಸಾಲಿಗ್ರಾಮ, ಪೆರ್ಡೂರು, ಇರಾ, ಕರ್ನಾಟಕ, ಧರ್ಮಸ್ಥಳ, ಸುರತ್ಕಲ್, ಕುಂಡಾವು, ಸೌಕೂರು, ಕಾಟಿಪಳ್ಳ ಮುಂತಾದ ಮೇಳಗಳಲ್ಲಿ 35 ವರ್ಷಗಳ ಕಾಲ ದುಡಿದು ನಂತರ ಆಟಗಳಿಗೆ ಸ್ವೇಚ್ಛಾ ನಿವೃತ್ತಿ ಘೋಷಿಸಿದರು. ಸಂಯಮಂ ಎಂಬ ಸಂಚಾರಿ ತಾಳಮದ್ದಲೆಯ ಕೂಟವೊಂದನ್ನು ಕಟ್ಟಿ ಅಖಿಲ ಕರ್ನಾಟಕದಾದ್ಯಂತ ಹಾಗೂ ಹೊರ ರಾಜ್ಯಗಳಲ್ಲೂ ತಿರುಗಾಟ ಮಾಡಿ, ತಾಳಮದ್ದಲೆಯ ಪ್ರಚಾರದಲ್ಲಿ ಯೋಗದಾನ ನೀಡಿದ್ದಾರೆ. ತಾಳಮದ್ದಲೆಯ ಎಪ್ಪತ್ತು ಪ್ರಸಂಗಗಳು, ಎಂಭತ್ತು ಪ್ರಸಂಗಗಳು, ಹಾಗೂ ನೂರೈವತ್ತು ನಲ್ನುಡಿಗಳು ಎಂಬ ಗ್ರಂಥ ಇವರ ಪ್ರಕಾಶನಗಳು. ಮೇಳಗಳಲ್ಲಿದ್ದ ಕಾಲದಲ್ಲಿ, ಪರಿಸ್ಥಿತಿಗನುಗುಣವಾಗಿ ಇಪ್ಪತ್ತಕ್ಕೂ ಅಧಿಕ ಪ್ರಸಂಗಗಳನ್ನು ಪ್ರಾಸಂಗಿಕವಾಗಿ ರಚಿಸಿದ ಶ್ರೀಯುತರು, ತಮ್ಮ ರಚನೆಗಳಿಗೆ ತಮ್ಮ ಹೆಸರು ಬೇಕೆಂದು ಎಂದೂ ಬಯಸಿದವರಲ್ಲ. ತಮ್ಮ ರಚನೆಗಳನ್ನು ಜತನದಿಂದ ಕಾಪಿಟ್ಟವರೂ ಅಲ್ಲ. ಹಾಗಾಗಿ ಅವರ ಅನೇಕ ಕೃತಿಗಳು ಅಲಭ್ಯವಾಗಿವೆ.

ಇವರು ಬರೆದ ಪ್ರಸಂಗಗಳು: ಸತೀ ಸೀಮಂತಿನಿ, ಬಸರೂರ ಭಾಗ್ಯ, ಮಹರ್ಷಿ ಋಷ್ಯಶೃಂಗ, ರುದ್ರಿ, ವಧು ಲೋಲಾಕ್ಷಿ, ಶ್ರೀಕೃಷ್ಣ ತುಲಾಭಾರ, ಸ್ವರ್ಣಸೌಜನ್ಯ

**ಟಿಪ್ಪಣಿ** :

# ಪ್ರಸಂಗ ಸಾಹಿತ್ಯ

**ಕಾಂಬೋಧಿ - ಝಂಪೆ**

ಕಮಲವತಿಪುರವ ಪರಿಪಾಲಿಸುತಲಿರ್ದನಾ |
ಕಮಲಭೂಪನು ಪ್ರಜರನಮಿತ ಮಮತೆಯೊಳು ||
ಕಮನೀಯ ಚಲುವೆಯೋರ್ವಳು ಜನಿಸೆ ರತಿಯೆನುತ |
ವಿಮಲನಾಮದಿ ಪೊರೆದ ಪರೆಯ ಹದಿನಾರು || 1 ||
ಕೇಳು ಸಚಿವನೆ ಎನ್ನ ಬಾಲೆಗೊಪ್ಪುವ ವರ ವಿ |
ಶಾಲ ಭೂಮಿಯೊಳು ತಾ ಲೀಲೆಯೊಳಗಿರಲು ||
ಓಲೈಸುತವಗೆ ಮಮ ಬಾಲೆಯನ್ನಿತ್ತು ಗುಣ |
ಶೀಲನಳಿಯನ ಹೊಂದಿ ಮೇಲೆನಿಸಿ ಮೆರೆವೆ || 2 ||

**ಪೀಲು - ಅಷ್ಟ**

ಅರಸ ಲಾಲಿಸಿ ಕೇಳು ತಮ್ಮ ಪುತ್ರಿಯಳ |
ಕರವ ಪಿಡಿವ ಭಾಗ್ಯವೀ ಧರಿತ್ರಿಯಳ ||
ಪರಿಧಿಯೊಳಿರುವಂತ ಪುರುಷ ವರ್ಗದೊಳು |
ಇರಲಾರದೆನಿಸಿದೆ ಮನ್ಮನಸಿನೊಳು || 3 ||
ಅದರಿಂದ ಪೇಳ್ವೆ ಮಾದ್ರೇಶ ಕೌಂಡ್ಲಿಕಗೆ |
ಮುದದೊಳಾಕೆಯನೀಯೆ ಸಂಬಂಧದೆಸುಗೆ ||
ಒದಗಿ ಬಪ್ಪುದು ಸೋದರಳಿಯನ ಬಲವು |
ಇದರ ಮೇಲಿಹುದು ನಿಮ್ಮಿಷ್ಟದ ಒಲವು || 4 ||

**ಸೌರಾಷ್ಟ್ರ - ತ್ರಿವುಡೆ**

ಸರಿಯಮಾತ್ಯನೆ ನಿನ್ನ ನುಡಿಯಿದು |
ಬರೆಸುವೆನು ಲೇಖನವ ನಾಳೆಗೆ |
ಹರೆಯವಿನ್ನೂ ಸಣ್ಣದಿರಲಾ | ತುರವದೇಕೆ || 5 ||
ಇತ್ತ ಮಾದ್ರದಿ ಭರಿತ ಓಲಗ |
ವಿತ್ತು ಕೌಂಡ್ಲಿಕ ನೃಪನು ತನ್ನಯ |
ಚಿತ್ತದುಮ್ಮಳಿಕೆಗಳ ಸಚಿವಗೆ | ಬಿತ್ತರಿಸಿದ || 6 ||
ಹಿಂದೆ ಕಾಪಾಲಿಕನು ಪೇಳಿಹ |
ಸಂದ ಜನ್ಮದೊಳಾನು ಪಾರ್ಥಿಯು |
ಅಂದು ರಣದಸಹಾಯಕತ್ವದಿ | ಕೊಂದ ಕೃಷ್ಣ || 7 ||
ಬಿಡದು ಜನ್ಮಾಂತರದ ದ್ವೇಷವು |
ಬಡಿವೆನಿಂದಿಗೆ ಕೃಷ್ಣನನು ಪೊರ |
ಮಡಲಿ ಸೈನ್ಯವು ದ್ವಾರಕೆಗೆ ಎನೆ | ನುಡಿದ ಮಂತ್ರಿ || 8 ||

**ಕಾಪಿ - ಅಷ್ಟ**

ತಾಗಿದರಯ್ಯ ವಿಕ್ರಮರು | ಬಿರು |
ಸಾಗಿ ಕೃಷ್ಣನ ಕೊನೆಗಾಣಿಸಲವರು ||
ಪೋಗಿ ಪೊಂದಿದರಂತಕಾಲಯ ಸುಳ್ಳಲ್ಲ |
ಆ ಗರುವರಿಗಿಂತಲಧಿಕ ನೀನಲ್ಲಯ್ಯ || 9 ||
ಓಡಿ ಕೊಲ್ಲಲು ಬಲ್ಲ ಕೃಷ್ಣ | ಮತ್ತೆ |
ನೋಡಿ ನಗಾಡಿ ಅಸುವೆಳೆವನು ತೀಕ್ಷ್ಣ ||
ರೂಢಿಯೊಳೀಗಿಲ್ಲ ಕಂಸ ಮಾಗಧ ಚೈದ್ಯ |
ಪಾಡೇನು ನರಕ ಪೌಂಡ್ರಕ ಹಂಸ ಡಿಬಿಕರ || 10 ||

**ಭೈರವಿ - ಏಕ**
ಅರಿತೆನರಿತೆ ಮಾಧವನ | ಬಲು |
ತರ ಸಾಮರ್ಥ್ಯದ ಹದನ ||
ವರಬಲಗಳ ಸುಳ್ಳೆನಿಸಿ | ತರಿ |
ದಿರುವನೆ ರಿಪುಗಳ ಸಹಸಿ || 11 ||
ನಡೆಯುವೆ ಕಾನನದೆಡೆಗೆ | ವರ |
ಪಡೆಯುತ ವರ್ಧಿಪೆ ಮೇಗೆ ||
ಬಡಿದಪ್ಪಳಿಸುತ ಹರಿಯ | ನಾ |
ನಡಗಿಪೆ ಸೇಡಿನ ಉರಿಯ || 12 ||

**ಭಾಮಿನಿ ಅರ್ಧ**
ತೊರೆದು ರಾಜ್ಯವನಾಗ ಕೌಂಡ್ಲಿಕ |
ಬರುತರಣ್ಯಕೆ ಕಂಡು ಸುಸ್ಥಳ |
ಹರಿವ ನದಿಯೊಳು ಮಿಂದು ತಪಕೆನುತಿರದೆ ತರುವಿನ ಮೂಲದಿ || 13 ||

**ವಾರ್ಧಕ ಅರ್ಧ**
ದೃಷ್ಟಿಯನ್ನಿಟ್ಟು ನಾಸಾಗ್ರದೊಳು ಚರಣದಂ |
ಗುಷ್ಟವನ್ನೂರಿ ಪಂಚಾಗ್ನಿಮಧ್ಯದಿ ನಿಂದು |
ಕಟ್ಟುಗ್ರ ತಪವ ಗೈಯ್ಯುತ್ತ ಬ್ರಹ್ಮನ ಧ್ಯಾನ ನಿಷ್ಠೆಯೊಳು ಭಜಿಸುತಾಗ || 14 ||

**ಕೇದಾರ - ರೂಪಕ**
ವಾಣಿರಮಣ ಲೋಕಭರಣ |
ಶರಣ ಕರುಣ ಪೂರಣ | ಗೀ |
ರ್ವಾಣರೊಡೆಯ ಸತ್ಯಲೋಕಧೀಶ ನಿನಗೆ ವಂದನ ||
ಸೃಜನಕಾರ್ಯ ಗೈಯುತಿರುವ | ಅಜನೆ ಹಂಸವಾಹನ ||
ಭಜಿಸಿದವಗೆ ವರವನೀವ | ತ್ರಿಜಗ ನಮಿತ ಪಾವನ || 15 ||

(ತನ್ನ ತಲೆಯನ್ನೇ ಕಡಿಯಲುದ್ಯುಕ್ತನಾಗುತ್ತಾನೆ. ಆಗ ಬ್ರಹ್ಮನು ಬರುತ್ತಾನೆ.)

**ನವರೋಜು - ಏಕ**
ಮೆಚ್ಚಿದೆ ಕೌಂಡ್ಲಿಕ ತಪಕೆ | ಮನ |
ದಿಚ್ಛೆಯ ಬೇಡೀ ಕ್ಷಣಕೆ ||
ಹೆಚ್ಚಿನ ಕರುಣದೊಳಿತ್ತಪೆ ವಾಂಛೆಯ |
ಉಚ್ಚರಿಸೈ ದೃಢ ಭಕ್ತಿಗೊಲಿದೆ ನಾ || 16 ||

**ಕಾಂಬೋಧಿ - ಝಂಪೆ**
ದೀನಜನಉದ್ಧರಣ ವಾಣಿದೇವಿಯ ರಮಣ |
ನೀನೊಲಿದು ಕೇಳು ಬಿನ್ನಪವ ||
ಕ್ಷೋಣಿ ಮೂರರೊಳಿರುವ ಯೋನಿ ಸಂಜಾತರಿಂ |
ಹಾನಿಯೆನಗೊದಗದಾ ವರವ || 17 ||

**(ಏರುಪದ್ಯ)**
ಪುರುಷವರ್ಗದೊಳಾರು ಹರಣವೆಳೆಯದ ತೆರದಿ |
ವರವಿತ್ತು ಪಾಲಿಸೈ ದಯದಿ ||
ತರುಣಿವರ್ಗವದೆನ್ನ ಲಕ್ಷವಿಲ್ಲೆಲೆ ತಂದೆ |
ಕರುಣಿಸೈ ವರವೆರಡನಿಂದೆ || 18 ||

(ತಥಾಸ್ತು ಎಂದು ಬ್ರಹ್ಮನು ತೆರಳುತ್ತಾನೆ)

**ಸೌರಾಷ್ಟ್ರ - ತ್ರಿವುಡೆ**
ಗೆದ್ದ ನಾನಿನ್ನೇನೆನುತ ನೆಲ |
ನೊದ್ದು ಕೌಂಡ್ಲಿಕನಾಗ ತೆರಳಿದ |
ಬದ್ಧ ವೈರಿಯ ಕೊಲ್ವ ವರಬಲ | ವಿದ್ದಿರಲ್ಕೆ || 19 ||

**ಸಾಂಗತ್ಯ - ರೂಪಕ**
ಇದಿರಾದ ನಾರದ ಮುನಿಪನ ಕಾಣುತ |
ಪದುಳದಿ ಕೌಂಡ್ಲಿಕನೆರಗೆ ||
ಒದಗಿತೇನಯ್ಯ ಕಾನನವಾಸ ಮಾದ್ರೇಶ |
ಮುದದಿಂದ ಪೇಳ್ವುದೆನ್ನೊಳಗೆ || 20 ||
ಮುನಿಪುಂಗವನೆ ಎನ್ನ ಜನ್ಮಾಂತರದ ಶತ್ರು |
ವೆನಿಸಿರ್ಪ ಕೃಷ್ಣನ ಕೊಲಲು ||
ಘನತಪ ವಿರಚಿಸೆ ವನಕೈದಿದೆನು ಬ್ರಹ್ಮ |
ನನುಗ್ರಹಿಸಿದ ವರಗಳನು || 21 ||

**ಸುರುಟಿ - ಏಕ**
ಏನಿದು ಮಾದ್ರೇಶ | ಇದರೊಳ |
ಗೇನಿದೆ ಸಂತೋಷ ||
ನೀನೀತೆರದಲಿ ಕಾರಣವಿಲ್ಲದೆ |
ಆ ನೀಲಾಂಗನ ಪ್ರಾಣವ ಸೆಳೆವುದು || 22 ||
ತಾಳ್ಮೆಯೆನಗೆಯಿಲ್ಲ | ಹರಿಯೊಳು |
ಕಾಳಗ ಬೇಕಲ್ಲ ||
ತಾಳುವೆ ನಾ ಮುನಿ | ಪಾಲನೆಂಟು ದಿನ |
ಈ ಲೋಕದಿ ಹರಿ | ಲೀಲೆಯ ನಿಲಿಸುವೆ || 23 ||
ಸರಿ ಸರಿಯರಮನೆಗೆ | ಗೈದಪೆ |
ಸರಿ ಕಾರಣ ನಿನಗೆ ||
ಸರಿಯಲೆಂಟು ದಿನ | ಹರಿಯೊಳು ಭೀಕರ |
ಧುರವೇರ್ಪಡಿಸುವೆ | ವರಬಲ ಗೆಲಿಪುದು || 24 ||

**ಸೌರಾಷ್ಟ್ರ - ತ್ರಿವುಡೆ**
ದ್ವಾರಕಾವತಿಯೊಳಗೆ ಮೆರೆಯುತ |
ಶ್ರೀರಮಾಧವ ಓಲಗದೊಳಿರೆ |
ಭೂರಿವೈಭವವೆತ್ತು ಜನಪರಿ | ವಾರ ಸಹಿತಾ || 25 ||
ಬಂದ ನಾರದನನ್ನು ಕಾಣುತ |
ಇಂದಿರಾಧವನೆದ್ದು ವಂದಿಸಿ |
ಚೆಂದದೊಳಗುಪಚರಿಸಿ ಕೇಳಿದ | ಬಂದ ಹದನ || 26 ||

**ಕೇದಾರಗೌಳ - ಅಷ್ಟ**
ಹರಿಯೇ ಲಾಲಿಸು ತವ ದರುಶನ ಲಾಭವು |
ದೊರೆತುದು ಸೌಭಾಗ್ಯವು ||
ದುರುಳ ರಾಕ್ಷಸರ ಸಂಹರಿಸುತ ಧರೆಯೊಳು |
ಸ್ಥಿರಗೊಳಿಸಿಹೆ ಧರ್ಮವ || 27 ||
ಆದರಾಲಿಸು ಮಾದ್ರವಾಳುವ ಕೌಂಡ್ಲಿಕ |
ಸಾಧಿಸುವನು ಹಗೆಯ ||
ಕಾದಲೈತಹನ ನಿಲಿಸಿರ್ಪೆಂಟು ದಿವಸವ |
ಆ ದುಷ್ಟಗಿದೆ ವರವು || 28 ||

**ಆರ್ಯಸವಾಯ್ - ಏಕ**
ಪುರುಷರಿಗಸದಳವವನ ಕೊಲ್ಲಲಿಕೆ |
ಧರೆಯೊಳು ಯೋನಿ ಸಂಜಾತರಿಗೆ ||
ತರುಣಿಯಯೋನಿಜೆಯಲ್ಲದೆ ಪರರಿಂ |
ಹರಿಯದು ವಧೆಯದು ಹರಿ ನಿನಗೆ || 29 ||

**ಕೇದಾರಗೌಳ - ಅಷ್ಟ**
ಭಲರೇ ಮೆಚ್ಚಿದೆ ಮುನಿಯೊರೆದುದು ಲೇಸಾಯ್ತು |
ಇರದೆಂಟು ದಿವಸದಲಿ ||
ದುರುಳನ ಪೆಸರಡಗಿಸುವೆ ಸಂಶಯಬೇಡ |
ತೆರಳು ನಿಶ್ಚಿಂತೆಯಲಿ || 30 ||

**ಸೌರಾಷ್ಟ್ರ - ತ್ರಿವುಡೆ**
ಜಲಜದಳಲೋಚನೆಯು ರುಕ್ಮಿಣಿ |
ಅಲಸದೈದಿದಳಾಗ ರಮಣನ |
ನಳಿನಪದಗಳಿಗೆರಗೆ ಕೃಷ್ಣನ | ವಳನು ಕೇಳ್ದ || 31 ||

**ಕೇದಾರಗೌಳ - ಅಷ್ಟ**
ಮಾರನ ಮದದಾನೆ ಮನದೊಳು ದುಗುಡ ವಿ |
ದಾರಿಂದ ನಿನಗಾಯಿತು ||
ಪಾರಮಾರ್ಥದಿ ಪೇಳಲಾನದ ನಿಜಕು ನಿ |
ವಾರಿಸುವೆನು ರಮಣಿ || 32 ||
ರಮಣನೆ ಲಾಲಿಸು ಮಮ ಪುತ್ರ ಸ್ಮರನಿಗೆ |
ಸಮನಿಸಿಹುದು ಪ್ರಾಯವು ||
ಗಮನಿಸಿರವಗೋರ್ವ ಕನ್ಯೆಯ ತಂದೀಗ |
ವಿಮಲ ಲಗ್ನವ ಗೈವುದು || 33 ||

**ಸುರುಟಿ - ಏಕ**
ಚಿಂತೆಯ ಬಿಡು ರಮಣಿ | ಮದುವೆಯ |
ಸಂತಸದಲಿ ಸುಗುಣಿ ||
ಕಂತುವಿಗೆಸೆಯುವೆ | ಎಂಟನೆ ದಿವಸ ಮ |
ಹಾಂತ ಯತ್ನದಲಿ | ದಂತಿ ಗಾಮಿನಿಯೆ || 34 ||

**ಕಾಂಬೋಧಿ - ಝಂಪೆ**
ಪದುಮನಾಭನೆ ನೀನು ನುಡಿದವಧಿಯೊಳು ಸುತಗೆ |
ಮದುವೆಯನು ಮಾಡದಿರಲು ||
ಹದಿನಾರು ಸಾವಿರದ ಸತಿಯರನ್ನೊಡಗೂಡಿ |
ಪದವಗಲಿ ದೂರವಿರುವೆ || 35 ||
ವಸುದೇವ ದೇವಕಿಯರಾಣೆ ಸುತನಾಣೆ ನಾ |
ನುಸುರಿದಂತೆಂಟು ದಿನಕೆ ||
ವಸುಮತಿಯೊಳರಸಿ ರತಿಯಂತಿರುವ ಕನ್ಯೆಯನು |
ಒಸೆದೀವುದೆನ್ನ ಶಪಥ || 36 ||

**ವಾರ್ಧಕ ಅರ್ಧ**
ಸುದತಿಯೊಳು ಶಪಥವನ್ನಾಡಿ ಕೃಷ್ಣನು ಬಳಿಕ |
ಮುದದಿ ಮನದೊಳಗೆ ಯೋಚಿಸಿದ ಧರೆಯೊಳಗೆ ದ್ರೌ |
ಪದಿಯಲ್ಲದನ್ಯರಾರಿಲ್ಲಯೋನಿಜೆಯವಳ ನೇತೃತ್ವವಿದಕೆನ್ನುತಾ || 37 ||

(ದಾರುಕನನ್ನು ಕರೆಯುತ್ತಾನೆ)

**ನಾದನಾಮಕ್ರಿಯೆ - ಅಷ್ಟ**
ಕರೆಸಿದುದೇನು ಕೃಷ್ಣಯ್ಯ | ಈಗ |
ಒರೆವುದೆನ್ನೊಳು ಬೇಗ ನಡೆಸುವೆನಯ್ಯ ||
ಅರಿಗಳಾಗಮನವೋ ಪ್ರಜೆಗಳ ದಂಗೆಯೋ |
ಹರಿ ನಿನ್ನಿಂದಾಗದೆ ಇರಲು ನಾನಿರ್ಪೆನು || 38 ||
ಗೋಪಾಲ ನುಡಿದನಾತನಿಗೆ | ಪೋಗಿ |
ಭೂಪಾಲ ಧರ್ಮರಾಯನಿಗೆ ||
ಆ ಪತಿವ್ರತೆಯನ್ನು ಕಳುಹೆಂದು ಹೇಳಿ ನೀ |
ದ್ವೀಪಿನಗರದಿಂದ ಸತಿಯನ್ನು ಕರೆತಾರೋ || 39 ||

**ಸೌರಾಷ್ಟ್ರ - ತ್ರಿವುಡೆ**
ಹಸ್ತಿನಾವತಿಯೊಳಗೆ ಧರ್ಮಜ |
ಸುತ್ತ ನೆರವುತ ಸೋದರರುಗಳ |
ಪೃಥ್ವಿಯಲಿ ಧರ್ಮವನು ನೆಲೆಗೊಳಿ | ಸುತ್ತ ಹರುಷ || 39ಅ ||
ಬಂದ ದಾರುಕನನ್ನು ಕಾಣುತ |
ಚಂದದಲಿ ಪೀಠವನು ಈಯುತ |
ಬಂದ ಕಾರಣ ಪೇಳೆನಲು ಬಲು | ಚಂದದಿಂದ || 40 ||

**ಆರ್ಯಸವಾಯ್ - ಏಕ**
ಧರ್ಮಕೆ ರಾಜನೆನ್ನಿಸಿದವ ಲಾಲಿಸು |
ನಿಮ್ಮವರಾರೂ ಬೇಡೆಂಬೆ ||
ಧರ್ಮದ ಸತಿಯನು ಕರೆದೊಯ್ಯಲು ನಾ |
ಬಿಮ್ಮಗೆ ರಥಸಹಿತಲೆ ಬಂದೆ || 41 ||

**ಮಾರವಿ - ಏಕ**
ಕೇಳುತಲಿದ ಕಣ್ಣಲಿ ಕಿಡಿ ಸೂಸುತ |
ಫಾಲಾಕ್ಷನ ತೆರದಿ ||
ಗಾಳಿಯಣುಗ ಗದೆಯನ್ನೆತ್ತಿದ ಕಡೆ |
ಗಾಲಗೈವೆ ಭರದಿ || 42 ||
ಓಡುವೆಯೆಲ್ಲಿಗೆ ಬಡಕುರಿ ದಾರುಕ |
ಗಾಡಿ ಹೊಡೆವ ಮಗನೆ ||
ನೀಡುವೆವೈ ನಮ್ಮವರ ಪತ್ನಿಯ |
ಗಾಢದಿ ಸೇರು ಮನೆ || 43 ||

**ಭಾಮಿನಿ ಅರ್ಧ**
ತಡೆದು ಧರ್ಮಜನೊಡನೆ ವಿವರವ |
ಪಡೆದು ಪಾಂಚಾಲೆಯನು ಕರೆಸಿದ |
ಜಡಜಲೋಚನೆ ಬರಲು ವಿವರವ ನುಡಿದ ಸತಿಗಾಗ || 44 ||

**ಸೌರಾಷ್ಟ್ರ - ತ್ರಿವುಡೆ**
ಮುನ್ನದಕ್ಷಯ ವಸನವೀಯುತ |
ತನ್ನ ಮಾನವ ಕಾಯ್ದು ಸಲಹಿದ |
ಅಣ್ಣನಿಂಗೇನಾಯ್ತೊ ಕಾಣೆನು | ಎನ್ನುತಾಗ || 45 ||
ಹೋಗಿ ಬಹೆ ನಾ ದ್ವಾರಕಾವತಿ |
ಗೀಗಲೆನ್ನುತ ಪತಿಗಳಿಗೆ ತಲೆ |
ಬಾಗಿ ಪೊರಟಳು ದಾರುಕನ ಸಹ | ನಾಗವೇಣಿ || 46 ||

**ಸಾಂಗತ್ಯ - ರೂಪಕ**
ಬಂದೆಯಾ ತಂಗಿ ನಿನ್ನೈವರು ಕುಶಲವ |
ಹೊಂದಿರುವರೆ ಪುರಜನರು ||
ಬಂದುದು ಲೇಸಾಯ್ತು ಘನಕಾರ್ಯವೊಂದು ನಿ |
ನ್ನಿಂದಲೇ ಆಗಲಿಕಿಹುದು || 47 ||
ನೀನಾವ ಸಂಕಟದೊಳಿರ್ಪೆಯೊ ಎನುತಲಿ |
ನಾನವಸರದಿಂದ ಬಂದೆ ||
ಏನಾಗಬೇಕೀಗ ಎನ್ನಿಂದಲೆನ್ನುತ |
ಸಾನುರಾಗದಿ ಪೇಳ್ವುದೆನಗೆ || 48 ||

**ನವರೋಜು - ಏಕ**
ತೆರಳುವುದು ಕಮಲಾವತಿಗೆ | ಅದ |
ಕರಸ ಕಮಲಭೂಪನ ಬಳಿಗೆ ||
ತರಳೆ ರತಿಯ ನಿನ್ನಳಿಯ ಕಾಮನಿಗೆ |
ವರಸತಿಯಪ್ಪಂತೆಸಗುತ ಬರುವುದು || 49 ||

**ಕೇದಾರಗೌಳ - ಝಂಪೆ**
ಅಣ್ಣ ಹುಡುಗಾಟವೇನು | ನಾನೋರ್ವ |
ಹೆಣ್ಣು ನೀ ಮರೆತೆಯೇನು ||
ಎನ್ನಿಂದ ಸಾಧ್ಯವಹುದೆ | ಈ ಕಾರ್ಯ |
ವನ್ಯರಾರಿಗು ಪೇಳದೆ || 50 ||

**ಸುರುಟಿ - ಏಕ**
ಲಾಲಿಪುದೆಲೆ ಭಗಿನಿ | ನೀನಹೆ |
ಶೀಲೆ ಯಾಜ್ಞಸೇನಿ ||
ಕಾಲಗರ್ಭದಲಿ | ಹೂಳಿದೆ ಮರ್ಮವು |
ಮೇಲೆನ್ನಯ ಋಣ | ಜಾಲ ತೀರುವುದು || 51 ||
ನಿನ್ನಯ ಪದಯುಗವ | ನಂಬುತ |
ಲಿನ್ನೈದುವೆ ಮಾಧವ ||
ಕನ್ನೆಯ ಸ್ಮರನಿಗೆ ಎಂಟನೆ ದಿವಸದಿ |
ಇನ್ನಾನೃಪ ಕೊಡುವಂತೆ ಕರುಣಿಪುದು || 52 ||

(ಬೀಳ್ಕೊಳ್ಳುವಳು)

**ದ್ವಿಪದಿ**
ಅಣ್ಣನಿಂ ಬೀಳ್ಕೊಂಡು ಕಮಲವತಿ ಪುರಕೆ |
ಕನ್ನೆಯಾಗಮಿಸಿದಳು ಭರದಿಂದಳಾಕೆ || 53 ||
ದ್ವಾರಪಾಲಕರನ್ನು ಬೆಸಗೊಂಡಳವಳು |
ನಾರಿ ದ್ರೌಪದಿ ಕಾರ್ಯವಿಹುದು ಭೂಪನೊಳು || 54 ||
ತ್ವರೆಯಿಂದ ಬಂದಿಹೆನು ಅರಸನಿಗೆ ಪೇಳಿ |
ಬರಿದೆ ಕಾಲವ ಕಳೆಯೆ ನಾನಾಪೆ ಕಾಳಿ || 55 ||

**ಮುಖಾರಿ - ಏಕ**
ಮಹರಾಜ ಕೇಳ್ವುದೀ ಕಲಾಪ |
ಬಲು ಚೋದಿಗ ಭೂಪ || ಪ ||
ದ್ವಾರಾಪಾಲಕರು ನಿಂದಿರಲಲ್ಲಿ |
ನಾರೀಯೋರ್ವಳು ಆಗಮಿಸಿದಳಲ್ಲಿ ||
ಭೂರಮಣನೊಳಗೆ ಮಾತಿಹುದೆನ್ನುತ |
ಭೂರಿಕೋಪದಲಿ ನುಡಿದಳು ಮಾತ || 56 ||

ಹಸ್ತಿನೆಯಾ ಮಹ ರಾಣಿಯಂತೆ |
ಮತ್ತೆ ಹೋಮದಲಿ ಹುಟ್ಟಿದಳಂತೆ ||
ಮತ್ತತೆ ತೋರ್ದಗೆ ಕಾಳಿಯು ಮುಂತೆ |
ಮತ್ತಕಾಶಿನಿಯು ದ್ರೌಪದಿಯಂತೆ || 57 ||

**ಭಾಮಿನಿ ಅರ್ಧ**
ಚರರ ನುಡಿಯನು ಕೇಳಿ ಭೂಪನು |
ಭರದೊಳೈದ ಸಮ್ರಾಜ್ಞಿಯನು ಕರೆ |
ತರೆಲು ದ್ವಾರಕೆ ಬಂದು ನೃಪ ಕಂಡೆರಗಿದನು ಮುದದಿ || 58 ||

**ನವರೋಜು - ಏಕ**
ಧನ್ಯನು ನಾನೀದಿನದಿ | ತವ |
ಉನ್ನತ ಪದ ಮಮ ಅಂಗಳದಿ ||
ಬನ್ನಿರಿ ನಿಮ್ಮಿಷ್ಟಾರ್ಥವ ಪೇಳ್ವೊಡೆ |
ಎನ್ನಿಂದಾಪುದ ನಿಶ್ಚಯ ಸಲಿಸುವೆ || 59 ||

**ನಾದನಾಮಕ್ರಿಯೆ - ಅಷ್ಟ**
ಕೇಳು ಕಮಲಾವತೀಶ | ನಿನಗೆ |
ಮೇಲಾಗಿ ದೊರೆವುದು ತೋಷ ||
ಪಾಲಿಸುತಿರ್ಪ ದ್ವಾರಕೆಯ ಎನ್ನಣ್ಣನು |
ಲೀಲಾಮಾನುಷ ದುಷ್ಟ ಶಿಕ್ಷಕನೆನಿಸಿರ್ಪ || 60 ||
ಅವನ ಪಟ್ಟದ ರಾಣಿಯೊಳಗೆ | ಸಂ |
ಭವಗೈದ ಮನ್ಮಥ ಮೇಗೆ ||
ಸವನಿಸಿದೆ ಕೇಳ್ ಸಕಲ ಸುಗುಣಗ |
ಳವಗೆ ವೈವಾಹವನು ರಚಿಸಲು |
ಭುವನದೊಳು ತವ ಸುತೆಯು ರತಿಯೆಂ |
ಬವಳ ನೀಡಲು ಪ್ರಾರ್ಥಿಪೆನು ನಾ || 61 ||

**ಆನಂದಭೈರವಿ - ರೂಪಕ**
ಮನದ ಸಂಕಲ್ಪವನ್ನು |
ಘನದಿ ಮುರಿಯಲದುವೆ ಪಾಪ | ವಲ್ಲವೇ | ದೋಷವಲ್ಲವೆ || 62 ||
ಕೊಡಲಿಕಾಗದದನು ಕೇಳಿ |
ಬಿಡದೆ ಮನಕೆ ಘಾಸಿಗೈವು | ದುಚಿತವೇ | ಪೇಳಿ ಖಚಿತವೆ || 63 ||

**ದೇಶಿ - ಅಷ್ಟ**
ಏನೆಂದೇ | ಭೂಪ | ಏನೆಂದೇ || ಪ ||
ಮಾಧವ ಪೇಳಿದನಾಧರಿಸಿಯೆ ಬಂದೆ |
ಭೂಧವ ರತಿಯನ್ನು ಕೇಳಲಿಕೆನುತ ||
ಸೋದರಳಿಯನಿಗೆ ಕನ್ಯೆಯ ಕೊಟ್ಟರೆ |
ಮಾಧವನಾಗ್ರಹ ಬಾಧಿಸದಿಹುದೇ || ಏನೆಂದೆ || 64 ||
ಇಷ್ಟಾದ ಮೇಲಕೆ ಸೃಷ್ಟಿಗೆ ಒಡೆಯನು |
ಸಿಟ್ಟಾಗುತ ಕೈ ಕಟ್ಟುತ ನಿನ್ನ ||
ಥಟ್ಟನೆ ಕನ್ಯೆಯ ಕಟ್ಟುತಲೊಯ್ದು |
ಪಟ್ಟದ ಸೊಸೆಯೆಂದಿಷ್ಟದಿ ಗೈವ || ಏನೆಂದೆ || 65 ||

**ಕಂದ**

ಆತತುಕ್ಷಣದಲಿ ಬಂದಳು |
ಆ ತಳೋದರಿ ರತಿ ದ್ರೌಪದಿಯಂ ಚಿಕ್ಕಮ್ಮಾ ಎನುತಂ ||
ಸಾತಿಶಯದಿಂದೆರಗುತ ಪಿತನೊಳು |
ಮಾತಾಡಿದಳತಿ ದೈನ್ಯದಿ ತನ್ನ ಮನೋಗತವಂ || 66 ||

**ದೇಶಿ - ಅಷ್ಟ**

ಏನಿದು | ತಾತ | ಏನಿದು || ಪ ||
ಆ ನಿಟಿಲಾಕ್ಷನ ಹಣೆಗಣ್ಣಿನುರಿಯಲಿ |
ಆ ನಗಧರ ಸುತನಳಿದಾಮೇಲೆ ||
ಆ ನಿಶಾಚರ ಶಂಬರನೆಂಬವನು ಬಂದು |
ತಾನಪಹರಿಸಿರ್ದನೆನ್ನುವನು || 67 ||
ಹರನ ಕರುಣದಿಂದ ಸ್ಮರ ತಾನು ಕೃಷ್ಣಗೆ |
ವರಸುತನಾಗಿ ಸಂಜನಿಸಿರಲು ||
ದುರುಳ ಶಂಬರನಪಹರಿಸುತ್ತಲವನನು |
ಶರಧಿಗೆಸೆಯೆ ಮೀನು ಕೊಂಡೊಯ್ದಿತು || 68 ||
ಅಂದು ರಕ್ಕಸನನ್ನು ಸ್ಮರ ಕೊಂದು ಎನ್ನಯ |
ಬಂಧವಿಮೋಚನ ಮಾಡಿರ್ದನು ||
ಹೊಂದುವಾಪೇಕ್ಷೆಯೊಳಾನಿರೆ ನಾರದ |
ಬಂದಾಗ ಹರೆಯದಂತರ ಪೇಳ್ದನು || 69 ||
ನಾನಾಗಲಗ್ನಿಪ್ರವೇಶವ ಗೈದಿರ್ದೆ |
ತಾ ನಿನ್ನ ಮಗಳಾಗಿ ಜನಿಸಿರ್ಪೆನು ||
ಮೀನಕೇತನಗೆ ನೀ ಎನ್ನನು ಕೊಡದಿರೆ |
ನಾನಗ್ನಿಯೊಳಗೆ ಧುಮ್ಮಿಕ್ಕುವೆನು || 70 ||

**ಸೌರಾಷ್ಟ್ರ - ತ್ರಿವುಡೆ**

ನಿನ್ನ ಹಿನ್ನೆಲೆ ಮಗಳೆ ತಿಳಿಯದೆ |
ಮುನ್ನ ಸಂಕಲ್ಪವನು ಗೈದಿಹೆ |
ಇನ್ನದನು ಮೀರಲ್ಕೆಯಾಗದೆ | ಗನ್ನಗತಕ || 71 ||
ಭಗವದಭಿಲಕ್ಷ್ಯದಲಿ ಗೈಯ್ಯುವ |
ಬಗೆಯದೆಲ್ಲವು ಧರ್ಮವಪ್ಪುದು |
ಭಗವದಣುಗಗೆ ಎನ್ನನೀವುದು | ಜಗದಿ ಮಾನ್ಯ || 72 ||
ಸರಿಯೆನುತ ಭೂಪತಿಯು ದ್ರೌಪದಿ |
ಗೆರಗಿ ಪೇಳಿದನೆಂಟನೆಯ ದಿನ |
ವರನ ದಿಬ್ಬಣಸಹಿತ ಬರುವುದು | ಪುರಕೆ ನೀವು || 73 ||

**ಸಾಂಗತ್ಯ - ರೂಪಕ**

ಬಂದೆರಗಿದ ದ್ರುಪದಜೆಯನು ಕಾಣುತ |
ಇಂದಿರಾಧವ ಪ್ರಶ್ನಿಸಿದನು ||
ಹೊಂದಿಹುದೆ ನೆಂಟತನವೆಂಟುದಿನ ದಿನಕೆ ಪೇ |
ಳಿಂದೀವರಾಕ್ಷಿ ನೀನೆನಲು || 74 ||
ಪೋಗಿ ಕೇಳಲು ಕೊಡಲೊಪ್ಪದ ಭೂಪತಿ |
ನಾಗ ಕನ್ನಿಕೆ ಹಿನ್ನೆಲೆಗಳ ||
ರಾಗದಿಂ ಧರ್ಮಸೂಕ್ಷ್ಮಗಳನ್ನು ಪೇಳಲು |
ಬೇಗದಿಂದೊಪ್ಪಿದ ನೃಪನು || 75 ||

(ದ್ರೌಪದಿಯು ಬೀಳ್ಕೊಳ್ಳುವಳು )

**ಕೇದಾರಗೌಳ - ಝಂಪೆ**
ಧಡಿಗ ಕೌಂಡ್ಲಿಕ ಮನದಿ | ಬಿಡದೇಳು ದಿನಗಳೆದೆ |
ಜಡಜನಾಭನೊಳು ಧುರವೆಸಗೆ ||
ಚಡಪಡಿಸುತಿಹೆನು ಕಿ | ತ್ತಡಿಯಿನ್ನು ಕಾಣೆಸನು |
ಬಿಡದೈದುವೆನು ದ್ವಾರವತಿಗೆ || 76 ||

**ಮುಖಾರಿ - ಏಕ**
ಕೇಳು ಕೇಳಯ್ಯ ಕೌಂಡ್ಲಿಕರಾಯ | ವಾರ್ತೆಯನೊಂದ |
ಕೇಳು ಕೇಳಯ್ಯ ಕೌಂಡ್ಲಿಕರಾಯ || ಪ ||
ಕಮಲಾವತಿ ಪುರವ ಪಾಲಿಸುತಿರುವ | ನಿಮ್ಮಯ ಮಾವ |
ವಿಮಲಾ ಕುಮಾರಿಯಳಾ ಪರಿಣಯವ ||
ಸುಮಶರಗೀಯುತ ವಿರಚಿಪ ನಿಮ್ಮನು |
ಗಮನಿಸದಿರುವುದು ಅವಮಾನವು ನಿಜ || 77 ||

**ಘಂಟಾರವ - ಅಷ್ಟ**
ಸೋದರಮಾವನು ಸೋದರಳಿಯನೆನ್ನ |
ಸಾದರದಿ ಕರೆಸುತ್ತ ಸುತೆಯನು |
ಮೋದದಿಂದೆನಗೀಯದೆ || 78 ||
ಎನಗಾಗದಾ ಕೃಷ್ಣನಣುಗಗೆ ಕೊಡುವನೆ |
ಘನದೊಳೈದುತಲವನ ಬಂಧಿಸಿ |
ವನಿತೆಯನ್ನೊಳೆ ತರುವೆನು || 79 ||

**ಆರ್ಯಸವಾಯ್ - ಏಕ**
ಎತ್ತಗಮನವಿದು ಬಿತ್ತರಿಸೈ ನೃಪ |
ಸತ್ತಮ ಎನ್ನೊಳಗೀಕ್ಷಣದಿ ||
ಉತ್ತಮ ಕಾರಣವೊಂದ ಕಲ್ಪಿಸಿಹೆ |
ಕತ್ತಿ ಮಸೆಯೆ ಹರಿಗೀದಿನದಿ || 80 ||
ಮಗಳನು ನಿನಗೀಯುವುದೆಂದೆನುತಲಿ |
ಪೊಗುಮಿಗೆಯಲಿ ನಿರ್ಧರಿಸಿದ್ದ ||
ಬಗೆದು ಕುಟಿಲತನ ಕೃಷ್ಣನು ಕನ್ಯೆಯ |
ಮಗನಿಗೆ ಹೊಂದಿಸಲೆನುತಿದ್ದ || 81 ||
ನಡೆ ಬೇಗದಿ ಕಮಲಾವತಿಗೀಕ್ಷಣ |
ಬಡಿಯುತ ಮಾವನ ಕನ್ಯೆಯನು ||
ಪಡೆವೆತ್ನಕೆ ನೀನಿಳಿಯಲು ಕೃಷ್ಣನು |
ಒಡನೈತಹ ಕಾಳಗಕಿನ್ನು || 82 ||

**ಸೌರಾಷ್ಟ್ರ - ತ್ರಿವುಡೆ**
ಮುನಿಪ ಸಂತಸಗೊಂಡೆ ಕೃಷ್ಣನು |
ಅನುವರಕೆ ತಾನಾಗಿ ಬರುವಂ |
ತೆನಗೆ ಕಾರಣವಾಯ್ತು ವಂದಿಪೆ | ನಿನಗೆ ಇಂದು || 83 ||

(ದೂತನೊಂದಿಗೆ ತೆರಳುವನು)

**ಸಾಂಗತ್ಯ - ರೂಪಕ**
ಬಂದ ಪಾಂಡವರನ್ನಾದರಿಸಿ ಶ್ರಿಕೃಷ್ಣನು |
ಅಂದು ಮದುವಣಿಗನ ಕರೆಸಿ |
ಚಂದದಿ ಬಾಸಿಂಗ ಬಿಗಿದು ಸತಿಯರ ಸಹ |
ಮಂದಿರದಿಂ ಪೊರಟ ತರಹರಿಸಿ || 84 ||

ಕಮಲಭೂಪನು ದಿಬ್ಬಣಿಗರ ಸ್ವಾಗತಿಸಿ ಸಂ |
ಭ್ರಮದೊಳುಪಚರಿಸುತಲಾಗ ||
ಸಮನಿಸಲಿದೆ ಲಗ್ನ ಗಳಿಗೆ ಮೂರರ ಬಳಿಕ |
ಶ್ರಮವ ನೀಗಿಸಿಕೊಳ್ಳಿರೀಗ || 85 ||

**ಪಂತುವರಾಳಿ - ಮಟ್ಟೆ**
ಭರಿತವಿಭವದಿಂದಲಾಗ | ಬರುತ ಕೌಂಡ್ಲಿಕ |
ಸರಿದು ಮಂಟಪಕ್ಕೆ ತಾನು ಭರದಿ ನುಗ್ಗುತ ||
ವರನ ಪೀಠದಲ್ಲಿ ಕುಳಿತು ಮೀಸೆ ತಿರುಹಲು |
ಅರಸನಾಗ ಕಂಡು ಸನಿಹಕ್ಕೈದಿ ನುಡಿಸಲು || 86 ||

**ಕೇದಾರಗೌಳ - ಝಂಪೆ**
ಕಂದ ಕೌಂಡ್ಲಿಕನೆ ನೀನು | ಬಂದುದತಿ |
ಚಂದವದು ಕ್ಷೇಮವೇನು ||
ಇಂದೆನ್ನ ಕುವರಿ ರತಿಯ | ಕೊಡುತಿಹೆನು |
ಕಂದರ್ಪನಿಗೆ ಪರಿಣಯ || 87 ||

**ಮಾರವಿ - ಏಕ**
ಮಾವಯ್ಯನೆ ನೀನಾಲಿಸು ಮಗಳನು |
ಈವೆನು ತನಗೆನುತ ||
ಭಾವದಿ ಸಂಕಲ್ಪಿಸುತಲಿ ಸುಮಶರ |
ಗೀವುದೆಂತು ಪ್ರಸಕ್ತ || 88 ||

**ಕೇದಾರಗೌಳ - ಝಂಪೆ**
ಕನ್ನಿಕೆಯ ಮನವ ಮೀರಿ | ಅನ್ಯರಿಗೆ |
ಇನ್ನೀಯೆ ನರಕ ದಾರಿ ||
ಎನ್ನ ಮಾತೊಂದ ಕೇಳು | ಅನ್ಯವಧು |
ವನ್ನರಸಿಕೊಡುವೆ ತಾಳು || 89 ||

**ಮಾರವಿ - ಏಕ**
ಹುಡುಗಿಯ ಮಾತನು ಕೇಳುತ ಮಾವನೆ |
ಬೆಡಗಿನೊಳಾಡುವೆಯಾ ||
ಸಡಗರದಿಂದಲಿ ಕರೆತಾ ವಧುವನು |
ಕೊಡುವುದೆನಗೆ ಜೀಯಾ || 90 ||

**ಕೇದಾರಗೌಳ - ಝಂಪೆ**
ಕೆಡುವ ಕಾಲಕೆ ಬುದ್ಧಿಯು | ವಿಪರೀತ |
ಧಡಿಗನಂತಾಡ್ವ ನುಡಿಯು ||
ಕೆಡಬೇಡ ನಾ ಸಾರಿದೆ | ಕೃಷ್ಣ ತಾ |
ಬಿಡನು ನಿನ್ನನು ಕೊಲ್ಲದೆ || 91 ||

**ಮಾರವಿ - ಏಕ**
ರೋಗಿಯ ಬಯಕೆಯ ಹಾಲ ವೈದ್ಯ ತಾ |
ನಾಗಿ ಕೊಡುವ ತೆರದಿ ||
ಈಗೆಸದುದು ವರಬಲವೆನಗಿರೆ ಹರಿ |
ತಾಗಲೆನಗೆ ಧುರದಿ || 92 ||

**ಶಂಕರಾಭರಣ - ಮಟ್ಟೆ**
ಬಾಲನೆಂದು ಸಹಿಸೆ ನಾನು | ಛಲವ ತೋರುವೆ |
ಕಾಲಕೂಡಿ ಬಂದಿತೇನು ಮುಗಿಸೆ ಬಾಳುವೆ ||
ಖೂಳ ನಿನ್ನನಳಿಯನೆನಲು ನನಗೆ ನಾಚಿಕೆ |
ಮೂಳ ತೊಲಗದಿರಲು ತೊಡಿಪೆ ಸಾವಿನ ಕುಣಿಕೆ || 93 ||

(ಯುದ್ಧ- ಕಮಲಭೂಪನ ಸಾವು)

**ನಾದನಾಮಕ್ರಿಯೆ - ಅಷ್ಟ**
ಎಲವೊ ಕೌಂಡ್ಲಿಕನೆ ಮದಗರ್ವದಿ | ನೀನು |
ಲಲನೆಯ ಬಯಸುತ ಶೌರ್ಯದಿ ||
ಗಳಹಿದೆಯಾ ಮಾವನೊಳಗೀಗ | ನಿನ್ನ |
ಗಳ ಕಡಿವೆನು ನಾನು ಬಲು ಬೇಗ || 94 ||
ಬಿಡು ಬಡಿವಾರವನೆಲೆ ಮದನ | ಈಗ |
ಹುಡುಗಾಟವಲ್ಲವೆನ್ನೊಳು ಕದನ ||
ಪಡೆವೆ ರತಿಯನೆಂಬ ತವ ಮನಸು | ಇಂದು |
ಒಡನಾಗಲಿದೆ ನೋಡು ಬರಿ ಕನಸು || 95 ||

(ಯುದ್ಧ - ಮನ್ಮಥನ ಸಾವು ಬಳಿಕ ಎಲ್ಲರೊಂದಿಗೆ ಸಮೂಹ ಯುದ್ಧ. ರತಿಯನ್ನು ಎಳದೊಯ್ಯುತ್ತಾನೆ. )

**ದ್ವಿಪದಿ**
ವನಜಾಕ್ಷನಾಗ ದ್ರೌಪದಿಯನ್ನು ಕರೆದು |
ಘನವೇಗದೊಳು ಪೋಗಿ ವಧುವ ನೀ ತಹುದು || 96 ||
ಅಣ್ಣ ನೀನೇನೆಂಬೆ ಪುರಷವರ್ಗಗಳು |
ಮಣ್ಣು ಮುಕ್ಕಿರಲೆನ್ನ ಕಳುಹುವುದೆ ಪೇಳು || 97 ||
ಯೋನಿಸಂಭವ ಪುರಷರಿಂದಲಸದಳವು |
ನೀನಯೋನಿಜೆ ನಡೆಯದವನ ವಿಕ್ರಮವು || 98 ||

(ದ್ರೌಪದಿಯು ಕೌಂಡ್ಲಿಕನನ್ನು ತಡೆದು ನಿಲ್ಲಿಸುತ್ತಾಳೆ.)

**ಘಂಟಾರವ - ಅಷ್ಟ**
ನಿಲ್ಲು ನಿಲ್ಲೆಲೋ ಧಡಿಗ ಖಳಾಧಮ |
ಫುಲ್ಲನೇತ್ರೆಯ | ನಿಲ್ಲಿ ಬಿಡದಿರೆ |
ಚೆಲ್ಲ ಬಡಿವೆನು ನಿನ್ನನು || 99 ||
ಭಳಿರೆ ಭಾಪುರೆ ಲಲನೆ ನೀ ಬಂದೆಯಾ |
ಒಳಮನೆಯ ಬಲು | ಕೆಲಸ ಕಾರ್ಯಕೆ |
ಅಲಸದೀಗಲೆ ತೆರಳೆಲೆ || 100 ||

**ಆರ್ಯಸವಾಯ್ - ಏಕ**
ಚಂಡಿಯ ರೂಪವ ಕಾಣುತ ಕೌಂಡ್ಲಿಕ |
ಭಂಡನು ಮರಣವದಿಂದೆನಗೆ ||
ಖಂಡಿತವಿವಳಿಂ ಘಟಿಸುವುದಾದರೂ |
ಗಂಡಾಗಿ ಸಾವೆ ನಾ ಮೇಗೆ || 101 ||

**ಭಾಮಿನಿ**
ದುರುಳ ಮಡಿದಾ ಬಳಿಕ ದ್ರೌಪದಿ |
ಹರಿಯು ಸೂಚಿಸಲಾಂಜನೇಯನ |
ಕರೆಸಿ ಸಂಜೀವನವ ತರಿಸುತ | ಮೃತರನೆಲ್ಲರನು ||
ಮರಳಿ ಬದುಕಿಸಲಾಗ ಸರ್ವರು |
ಭರದ ನಿದ್ರೆಯ ತೊರೆದು ಬಂದರ |
ತೆರದೊಳೆದ್ದರು ಓಲಗದಿ ಮರುಕಳಿಸಿತುತ್ಸಾಹ || 102 ||

**ಘಂಟಾರವ - ಅಷ್ಟ**
ಎಲ್ಲಿಗೈದಿದ ಮಲ್ಲ ಕೌಂಡ್ಲಿಕನೀಗ |
ಚೆಲ್ಲ ಬಡಿವೆನು | ಹಲ್ಲ ಕಳಚುತ |
ಖುಲ್ಲನನು ಸ್ಮರನೆಂದನು || 103 ||

(ದ್ರೌಪದಿಯು, ಕೃಷ್ಣನು ಘಟನೆಯನ್ನು ವಿವರಿಸುತ್ತಾರೆ. ಮದುಮಕ್ಕಳಿಗೆ ಆರತಿ)

**ಢವಳಾರ - ಏಕ**
ಶ್ರೀರಮಣನ ಸುತ ಮನ್ಮಥಗೆ |
ನಾರೀಮಣಿ ರತಿ ದೇವತೆಗೆ ||
ಭೂರಿ ಸಂಭ್ರಮದಿ ಶೋಭಾನೆಯ ಪಾಡುತ |
ನಾರಿಯರು ಮುತ್ತಿನಾರತಿ ಎತ್ತಿರೆ ||
ಹೇಮದಾರತೀಯಾ ಬೆಳಗಿರೆ || ಶೋಭಾನೆ || 104 ||

*****ಶುಭಂ*****

# ಕೃತಜ್ಞತೆಗಳು

**ಅಂತರಜಾಲ ಪ್ರಕಾಶನ ಪ್ರಾಯೋಜಕರು:** ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ಸರ್ಕಾರ

**ಮೂಲ ಪ್ರಕಾಶಕರು:** (ಹಸ್ತ ಪ್ರತಿ)

**ಪ್ರಸಂಗ ಪ್ರತಿ ಆಧಾರ:** ಕವಿಯ ಮೂಲ ಹಸ್ತ ಪ್ರತಿ

**ಪ್ರಸಂಗ ಪ್ರತಿ ಕೊಟ್ಟವರು:** ಡಾ. ಪ್ರದೀಪ ಸಾಮಗ

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ:** ಡಾ. ಪ್ರದೀಪ ಸಾಮಗ

**ಅಂತರಜಾಲ ಪ್ರತಿ ಬರವಣಿಗೆ:** ವೆಂಕಟೇಶ್ ವೈದ್ಯ

**ಅಂತರಜಾಲ ಪ್ರತಿ ತಿದ್ದುಪಡಿ:** ಶ್ರೀಧರ ಡಿ.ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ್ ಉಪ್ಪೂರ

**ಅಂತರಜಾಲ ಪ್ರತಿ ಉತ್ಪಾದನೆ:** ರವಿ ಮಡೋಡಿ, ನಟರಾಜ ಉಪಾಧ್ಯ, ಅಶ್ವಿನಿ ಹೊದಲ

**ಅಂತರಜಾಲ ಪ್ರತಿ ಪ್ರಕಾಶನ:** ರವಿ ಮಡೋಡಿ, ಡಾ. ಪ್ರದೀಪ ಸಾಮಗ, ನಟರಾಜ ಉಪಾಧ್ಯ